APRIL 26, 2026

# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಭಾರತವು ಪವನ ಶಕ್ತಿ ಸಾಮರ್ಥ್ಯದಲ್ಲಿ** ಹೊಸ ಗಾಥೆಯನ್ನು ಬರೆಯುತ್ತಿದೆ, ದೇಶದ ಪವನ ಶಕ್ತಿ ಉತ್ಪಾದನಾ ಸಾಮರ್ಥ್ಯವು 56 ಗಿಗಾ ವ್ಯಾಟಗಳನ್ನು ಮೀರಿದೆ. ಕಳೆದ ಒಂದು ವರ್ಷದಲ್ಲಿ, ಸುಮಾರು 6 ಗಿಗಾ ವ್ಯಾಟ್ ನಷ್ಟು ಸಾಮರ್ಥ್ಯವನ್ನು ಸೇರಿಸಲಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. ಆಕಾಶವಾಣಿಯ ಬಹುಶ್ರುತ 'ಮನ್ ಕಿ ಬಾತ್' ಕಾರ್ಯಕ್ರಮದ, 133 ನೇ ಆವೃತ್ತಿಯಲ್ಲಿ ದೇಶ, ವಿದೇಶಗಳ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತ ಪವನ ಶಕ್ತಿ ಸಾಮರ್ಥ್ಯದಲ್ಲಿ ಇಂದು ವಿಶ್ವದಲ್ಲೇ ನಾಲ್ಕನೇ ಸ್ಥಾನದಲ್ಲಿದೆ ಎಂದರು.

<><><>

**ಪಿ.ಎಂ ನರೇಂದ್ರ ಮೋದಿ ಧ್ವನಿ- 45 ಸೆಕೆಂಡುಗಳು**

<><><>

**ನೈಋತ್ಯ ರೇಲ್ವೆ, ಹುಬ್ಬಳ್ಳಿ ವಲಯದ ಮೂಲಕ,** ಲಿಂಕ್-ಹಾಫ್‌ಮನ್-ಬುಷ್-ಎಲ್.ಎಚ್.ಬಿ. ಕೋಚ್‌ಗಳನ್ನು ಒಳಗೊಂಡ, ಹೊಸ ಮೇಲ್ ಎಕ್ಸ್‌ಪ್ರೆಸ್ ರೈಲು, ಬೆಂಗಳೂರು-ಮುಂಬೈ ಮಧ್ಯೆ, ಶೀಘ್ರ ಕಾರ್ಯಾರಂಭಿಸಲಿದೆ ಎಂದು, ರೇಲ್ವೆ ಖಾತೆ ಹಾಗೂ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಬೆಂಗಳೂರಿನ, ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ - ಬೆಮೆಲ್, ತಿಪ್ಪಸಂದ್ರ ಘಟಕಕ್ಕೆ ಭೇಟಿ ನೀಡಿ, ಹೈ ಸ್ಪೀಡ್ ರೈಲು ಉತ್ಪಾದನೆಗೆ ಮೀಸಲಿರುವ, ವಿಶೇಷ ಸಂಕೀರ್ಣ, 'ಆದಿತ್ಯ' ಕಟ್ಟಡವನ್ನು ಉದ್ಘಾಟಿಸಿ, ಮಾತನಾಡಿದರು. ಚೆನ್ನೈ-ಬೆಂಗಳೂರು ನಡುವಿನ, ಪ್ರಯಾಣದ ಸಮಯವನ್ನು, ಕೇವಲ 73 ನಿಮಿಷಗಳಿಗೆ ಇಳಿಸುವ, ನಿರೀಕ್ಷೆ ಹೊಂದಲಾಗಿದೆ. ಮುಂಬೈ-ಬೆಂಗಳೂರು ಮಧ್ಯೆ, ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್, ಶೀಘ್ರ ಕಾರ್ಯಾರಂಭಿಸಲಿದೆ. ಹಾಸನ-ಮಂಗಳೂರು ವಿಭಾಗದಲ್ಲಿ, ಮಾರ್ಗ ವಿದ್ಯುದೀಕರಣ ಪೂರ್ಣಗೊಳಿಸಿ, ಕಡಿದಾದ ಕರಾವಳಿ ಇಳಿಜಾರುಗಳಲ್ಲಿ, ಸ್ವಯಂಚಾಲಿತ ತುರ್ತು ಬ್ರೇಕಿಂಗ್, ವ್ಯವಸ್ಥೆ ರೂಪಿಸಲು ಯೋಜಿಸಲಾಗಿದೆ ಎಂದರು.

<><><>

**ಗುಡುಗು, ಸಿಡಿಲು ಬಡಿತದಿಂದ ಉಂಟಾಗುವ,** ಪ್ರತಿಕೂಲ ಪರಿಣಾಮಗಳನ್ನು ತಗ್ಗಿಸಲು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ನೀಡುವ ಸೂಚನೆಗಳನ್ನು, ಸಾರ್ವಜನಿಕರು, ಕಡ್ಡಾಯವಾಗಿ ಪಾಲಿಸುವಂತೆ, ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಕೋರಿದ್ದಾರೆ. ಗುಡುಗು-ಸಿಡಿಲಿನ ಮುನ್ಸೂಚನೆ ಅಥವಾ ಮುನ್ನೆಚ್ಚರಿಕೆ ಇದ್ದಲ್ಲಿ, ಪ್ರಯಾಣವನ್ನು ಮುಂದೂಡುವುದು; ದ್ವಿಚಕ್ರ ವಾಹನ ಸವಾರಿ ಮಾಡದಿರುವುದು; ಆಟದ ಮೈದಾನ, ಉದ್ಯಾನ, ಈಜುಗೊಳ ಮತ್ತು ಕಡಲ ತೀರಗಳಿಗೆ ಹೋಗದಿರುವುದು; ದೋಣಿ ವಿಹಾರ ಮತ್ತು ಈಜುತ್ತಿದ್ದರೆ, ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯುವುದು, ಮುಖ್ಯ ಎಂದರು.

<><><>

**ಮಹಾತ್ಮ ಗಾಂಧೀಜಿಯವರ,** ಗ್ರಾಮ ಸ್ವರಾಜ್ಯದ ಕನಸನ್ನು, ಗ್ರಾಮಗಳ ಸಮಗ್ರ ಅಭಿವೃದ್ಧಿ ಮೂಲಕ, ನನಸಾಗಿಸಲು, ರಾಜ್ಯ ಸರ್ಕಾರ, ಗ್ರಾಮ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡಿದೆ ಎಂದು, ಲೋಕೋಪಯೋಗಿ ಖಾತೆ ಸಚಿವ, ಸತೀಶ ಜಾರಕಿಹೊಳಿ, ಹೇಳಿದ್ದಾರೆ. ಬೆಳಗಾವಿಯ ಸುವರ್ಣ ವಿಧಾನಸೌಧದ, ಕೇಂದ್ರ ಸಭಾಂಗಣದಲ್ಲಿ, ರಾಷ್ಟ್ರೀಯ ಪಂಚಾಯಿತಿರಾಜ್ ದಿನಾಚರಣೆ ಕಾರ್ಯಕ್ರಮಕ್ಕೆ, ಚಾಲನೆ ನೀಡಿ, ಮಾತನಾಡಿದರು.

<><><>

**ಬೆಳಗಾವಿಯ ಮರಾಠಾ ಲಘು ಪದಾತಿ ದಳದ,** 16ನೇ ತುಕಡಿ, ಭೈರವ ಬಟಾಲಿಯನ್ ಸಂಸ್ಥಾಪನೆ ದಿನಾಚರಣೆ, ಜರುಗಿತು. ಭೈರವ ಪಡೆಯಿಂದ, ಗೌರವ ವಂದನೆ ಸ್ವೀಕರಿಸಿದ, ಮರಾಠಾ ಲಘು ಪದಾತಿ ದಳದ, ಸಮಾದೇಷ್ಠ, ಬ್ರಿಗೇಡಿಯರ್ ಜಾಯ್‌ದೀಪ ಮುಖರ್ಜಿ, ಭೈರವ ಬಟಾಲಿಯನ್ ನೂತನ ಅಧಿಕಾರಿಗಳಿಗೆ, ಧ್ವಜವನ್ನು ಹಸ್ತಾಂತರಿಸಿದರು.

<><><>

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ** ಖಾತೆ ಸಚಿವರಾದ ದಿನೇಶ ಗುಂಡೂರಾವ್ ನಾಳೆ, 27 ರಂದು ಬೆಳಗ್ಗೆ 10 ಗಂಟೆಗೆ ಧಾರವಾಡದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿರುವ ಲಸಿಕಾ ಕೇಂದ್ರಕ್ಕೆ ಚಾಲನೆ ನೀಡಲಿದ್ದಾರೆ. 11.30 ಕ್ಕೆ ಅಮ್ಮಿನಭಾವಿ ಗ್ರಾಮದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.

<><><>

**ಧಾರವಾಡ ರಂಗಾಯಣ,** ಇಂದು, ಬೇಸಿಗೆ ಶಿಬಿರದ ಮಕ್ಕಳಿಗಾಗಿ, ಬಣ್ಣದ ಅಂಗಳದಲ್ಲಿ, ಚಿಣ್ಣರ ತೇರು ಹಾಗೂ ಮಕ್ಕಳ ಸಂತೆ ಆಯೋಜಿಸಿದೆ. ಜನಪದ ಕಲಾವಿದ, ಇಮಾಮಸಾಬ್ ವಲ್ಲೆಪ್ಪನವರ, ಚಾಲನೆ ನೀಡಲಿದ್ದಾರೆ.

<><><>

**ಮಂಡ್ಯ ಜಿಲ್ಲೆ, ಮದ್ದೂರು ಉತ್ಸವದಲ್ಲಿ,** ಜಿಲ್ಲಾ ಉಸ್ತುವಾರಿ ಸಚಿವ, ಎನ್. ಚಲುವರಾಯಸ್ವಾಮಿ, ಜಾನಪದ ಕಲಾವಿದೆ ಲಕ್ಷ್ಮಮ್ಮ, ಕೃಷಿ ಸಾಧಕ ಪುಟ್ಟಸ್ವಾಮಿ ಸೇರಿದಂತೆ, 15 ಜನ ಸಾಧಕರನ್ನು, ಗೌರವಿಸಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>